ನಾವು ಮಾಡಿದ್ದೆವು.

ರಾಜಾಜಿನಗರ ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ.

11. ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಲ್ಲೇಶ್ವರಂ ಸಹಕಾರ ಸಂಘ ಹಾಗೂ ಕರ್ನಾಟಕ ರಾಜ್ಯ ಆಹಾರ ನಿಗಮಗಳು, ರಾಜಾಜಿನಗರ ಕ್ಷೇತ್ರದಲ್ಲಿ ಎಷ್ಟು ಶಾಖೆಗಳನ್ನು ತೆರದಿರುತ್ತಾರೆ ? (ವಿವರಗಳನ್ನು ಒದಗಿಸುವುದು)

ಆ) ಮೇಲ್ಕಂಡ ಸಂಘ ಹಾಗೂ ನಿಗಮದ ಶಾಖೆಗಳು ನಾಗರೀಕರಿಗೆ ನ್ಯಾಯಯುತವಾಗಿ ಪಡಿತರ ವಸ್ತುಗಳನ್ನು ನೀಡುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಈ) ಕ್ರಮ ತೆಗೆದುಕೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು
ನಿಗಮದ ಸಗಟು ವಿತರಣಾ ಡಿಪೋ – 1
ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು
ನಿಗಮದ ಚಿಲ್ಲರೆ ಡಿಪೋ – 27
ಮಲ್ಲೇಶ್ವರಂ ಸಹಕಾರ ಸಂಘದ ಚಿಲ್ಲರೆ ಡಿಪೋ – 11

ಆ) ಕೆಲವು ಪ್ರಕರಣಗಳಲ್ಲಿ.

ಇ) ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 11 ಮಲ್ಲೇಶ್ವರಂ ಸಹಕಾರ ಸಂಘದ ಡಿಪೋಗಳ ಪೈಕಿ 3 ನ್ಯಾಯಬೆಲೆ ಅಂಗಡಿಗಳವರ ವಿತರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕಂಡು ಬಂದ ಲೋಪದೋಷಗಳನ್ನು ಗುರುತಿಸಿ ಒಂದು ನ್ಯಾಯಬೆಲೆ ಅಂಗಡಿಗೆ ದಂಡ ವಿಧಿಸಿ ಎಚ್ಚರಿಕೆ ನೀಡಲಾಗಿದೆ. ಎರಡು ನ್ಯಾಯಬೆಲೆ ಅಂಗಡಿಗಳಲ್ಲಿ ಕಂಡು ಬಂದ ಅಕ್ರಮವನ್ನು ಗುರುತಿಸಿ ಹೆಚ್ಚಿನ ತನಿಖೆ ನಡೆಯುತ್ತಿದೆ.

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 27ಕೆ.ಎಫ್. ಸಿ.ಎಸ್.ಸಿ. ಚಿಲ್ಲರೆ ಮಳಿಗೆಗಳ ಪೈಕಿ 10ಚಿಲ್ಲರೆ ಮಳಿಗೆಗಳ ಕಾರ್ಯ ನಿರ್ವಹಣೆಯ ಬಗ್ಗೆ ಕೂಲಂಕುಷ ತನಿಖೆ ನಡೆಸಿ 4ಪ್ರಕರಣಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ, ಹಾಗೂ ಉಳಿದ 6ಪ್ರಕರಣಗಳ ಹೆಚ್ಚಿನ ತನಿಖೆ ನಡೆಯುತ್ತಿದೆ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಷ್ಮಣ್:– ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜಾಜಿನಗರ ಕ್ಷೇತ್ರದಲ್ಲಿ ಮಲ್ಲೇಶ್ವರಂ ಸಹಕಾರ ಸಂಘದಿಂದ ಮತ್ತು ಕರ್ನಾಟಕ ಆಹಾರ ನಿಗಮದಿಂದ ಎಷ್ಟು ಶಾಖೆಗಳು ಆಹಾರ ವಿತರಣೆ ಮಾಡುತ್ತಿವೆ ಎಂದು ಕೇಳಿದ್ದೆ. ಆ ಪ್ರಕಾರವಾಗಿ, ಕರ್ನಾಟಕ ಆಹಾರ ನಿಗಮದಿಂದ 27, ಮತ್ತು ಮಲ್ಲೇಶ್ವರಂ ಸಹಕಾರ ಸಂಘದಿಂದ 11 ಶಾಖೆಗಳಲ್ಲಿ ಆಹಾರ ಪದಾರ್ಥಗಳು ವಿತರಣೆಯಾಗುತ್ತಿವೆ. ಇದರಲ್ಲಿ ಮಲ್ಲೇಶ್ವರಂ ಸಹಕಾರ ಸಂಘದಿಂದ 5 ತಪ್ಪಿತಸ್ಥ ಚಿಲ್ಲರೆ ಮಳಿಗೆಗಳು ಮತ್ತು ಕರ್ನಾಟಕ ಆಹಾರ ನಿಗಮದವರು 10 ಚಿಲ್ಲರೆ ಮಳಿಗೆಗಳನ್ನು ತನಿಖೆ ಮಾಡಿದ್ದಾರೆಂದು ಹೇಳಿದ್ದಾರೆ. ಆ ಪ್ರಕಾರವಾಗಿ, 4

ಪ್ರಕರಣಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ, ಹಾಗೂ ಉಳಿದ 6 ಪ್ರಕರಣಗಳ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮಲ್ಲೇಶ್ವರಂ ಸಹಕಾರ ಸಂಘದಲ್ಲಿ 5 ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆಯಲ್ಲಿ ಲೋಪ ಕಂಡುಬಂದು, ಮೂರು ಮಂದಿ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದೂ ಹೇಳಿದ್ದಾರೆ. ನೀವು ಏನು ಕ್ರಮ ತೆಗೆದು ಕೊಂಡಿದ್ದೀರಿ ಮತ್ತು ತನಿಖೆ ಮಾಡುವಂಥ ಅಧಿಕಾರಿಗಳು ಆಹಾರ ಇಲಾಖೆಯವರೇ ಅಥವಾ ತೂಕ ಮತ್ತು ಅಳತೆಯ ಇಲಾಖೆಯವರೇ, ಇದನ್ನು ಮಾನ್ಯಮಂತ್ರಿಗಳು ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:– ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಾನು ಉತ್ತರವನ್ನು ಒದಗಿಸಿಕೊಟ್ಟಿದ್ದೇನೆ. ಮೂರು ಪ್ರಕರಣಗಳಲ್ಲಿ ಮುಂದಿನ ಕ್ರಮಕ್ಕಾಗಿ ಜಂಟಿ ನಿರ್ದೇಶಕರಿಗೆ ಕಳುಹಿಸಿಕೊಡಲಾಗಿದೆ ಎಂದು ನಮಗೆ ವರದಿ ಬಂದಿದೆ. ಅಷ್ಟೇ ಅಲ್ಲ ಫ್ಲೈಸ್ ಹಾಕುವಂತಹುದು ಇದ್ದರೆ, ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ:– ಈ ಎಲ್ಲಾ ಬ್ರಾಂಚಸ್‌ನಲ್ಲೂ ಕೂಡ ಸರಿಯಾಗಿ ಆಹಾರ ವಿತರಣೆ ಆಗುತ್ತಿಲ್ಲ. ಕಡಿಮೆ ಅಳತೆ ಕೊಡುತ್ತಿದ್ದಾರೆ. ಆ ದಿಸೆಯಲ್ಲಿ ನಮ್ಮ ಇನ್‌ಫಾರ್ಮಲ್ ರೇಷನಿಂಗ್ ಸಿಸ್ಟಮ್ ಏನಿದೆ ಇದನ್ನು ತೆಗೆಯುವುದು ಒಳ್ಳೆಯದೆಂದು ಕಾಣುತ್ತದೆ. ನಾವು ಏನು ಕಾನೂನುಗಳನ್ನು ಹೆಚ್ಚು ಹೆಚ್ಚು ಮಾಡುತ್ತೇವೆ, ಅದರಲ್ಲಿ ಲೋಪದೋಷಗಳು ಹೆಚ್ಚಾಗುತ್ತಿವೆ. ರೈಸ್‌ಅನ್ನು ಒಂಡು ಡಿಸ್ಟ್ರಿಕ್ಟ್‌ನಿಂದ ಇನ್ನೊಂದು ಡಿಸ್ಟ್ರಿಕ್ಟ್‌ಗೆ ತೆಗೆಯಬಾರದೆಂದು ಏನು ನಿರ್ಬಂಧ ಇತ್ತು. ಈ ಆಹಾರ ವಿತರಣೆ ನಿರ್ಬಂಧವನ್ನು ತೆಗೆದು ಹಾಕಿದ ಮೇಲೆ ಆಹಾರ ಬೆಲೆಗಳು ಎಷ್ಟೋ ಕಡಿಮೆಯಾಗಿದೆ. ಈ ದೃಷ್ಟಿಯಿಂದ ಈ ಇನ್‌ಫಾರ್ಮಲ್ ರೇಷನಿಂಗ್ ಏರಿಯಾ ಎಂದು ಇರತಕ್ಕದ್ದು ಒಳ್ಳೆಯದಲ್ಲ. ಇದು ಇರುವುದರಿಂದ ಅಧಿಕಾರಿಗಳಿಗೆ ಹೆಚ್ಚಿನ ಲೋಪದೋಷಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಮತ್ತು ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದರಲ್ಲಿ ಲೋಪದೋಷಗಳನ್ನು ಮಾಡುತ್ತಿದ್ದಾರೆ. ಇದನ್ನು ತೆಗೆದುಬಿಟ್ಟರೆ ಉತ್ತಮವಾಗುತ್ತದೆ ಎಂದು ಮಾನ್ಯ ಆಹಾರ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:– ಮಾನ್ಯ ಸಭಾಧ್ಯಕ್ಷಿಣಿಯವರೇ, ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳನ್ನು ಕೂಡ ತನಿಖೆ ಮಾಡಲು ವಿಜಿಲೆನ್ಸ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಒಂದು ವೇಳೆ ತೂಕದಲ್ಲಿ, ಅಳತೆಯಲ್ಲಿ ಹೆಚ್ಚು ಕಡಿಮೆ ಇದ್ದರೆ ಖಂಡಿತ ಸಂಬಂಧಪಟ್ಟ ತಹಸೀಲ್ದಾರ್‌ರವರಿಗೆ, ನಮ್ಮ ಇಲಾಖೆಯ ಅಧಿಕಾರಿಗಳಿಗೆ ಕಂಪ್ಲೈಂಟ್ ಕೊಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ:– ಬೆಂಗಳೂರು ನಗರದ ತ್ಯಾಗರಾಜನಗರ ಬಡಾವಣೆಯ ಸೊಸೈಟಿಯಲ್ಲಿ ಮುಗ್ಗಲು ಅಕ್ಕಿಯನ್ನು ಕೊಡುತ್ತಿದ್ದಾರೆ. ಇದನ್ನು ಸಂಬಂಧಪಟ್ಟ ಸೊಸೈಟಿಯಿಂದ ತಂದಿದ್ದೇನೆ. ಇದರ ಬಗ್ಗೆ ತನಿಖೆ ಮಾಡಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ. (ಅಕ್ಕಿಯನ್ನು ಅಧ್ಯಕ್ಷರಿಗೆ ಕಳುಹಿಸಿದರು)

Scarcity of Kerosene in the State.

39. SRI. M.V. VENKATAPPA (Mulabagilu):– Will the Minister for Food and Civil Supplies be pleased to state?

a) Whether it has come to the notice of the Government that there is a scarcity of kerosene oil in the State and it is not available to the public at reasonable price.